# ಗೋವು ಕಲಿಸುವ ಪಾಠ

ನಿತ್ಯವೂ ತಪ್ಪದೇ
ಗೋಧೂಳಿ ವೇಳೆಯಲಿ
ಬಂಧು ಬಾಂಧವರೊಡಗೂಡಿ
ಹಾದಿ ಬೀದಿ ತುಂಬ
ಧೂಳೆಬ್ಬಿಸಿ–
'ಹೌದು, ಹೌದು' ಎಂಬಂತೆ
ಗೋಣು ಕುಣಿಸುತ,
ಹೆಜ್ಜೆ ಮೇಲೆ ಹೆಜ್ಜೆ ಇಕ್ಕುತ
ಕೊರಳು ಕಿರು ಗಂಟೆಗಳ
ನಿನಾದವ ಮಾಡುತ
ಮಂದಗತಿಯೊಳಗೆ
ಬರುವ ಧನ–ಕರುಗಳ ನೋಟ
ಒಗ್ಗಟ್ಟಿನ ಸಂಕೇತ
ಉದರ ತುಂಬ
ಉಂಡ, ಮೇವನು ಮೆಲ್ಲ
ಮೆಲ್ಲನೆ ಮೆಲುಕುತ
ಕಾಲು ಸೋತರೂ
ನಿಂತೆಡೆ ಕದಲದೇ ನಿಂತು
ಜತೆಗಾರ ಬಂದೊಡೆ
ಮತ್ತೆ–ಮುಂದೆ ಚಲಿಸುವ
ನೋಟ ಸಮೂಹ
ಜೀವನಕ್ಕೊಂದು ಪಾಠ



■ **ಅರವಿಂದ ಜಿ. ಜೋಷಿ ಮೈಸೂರು**

ಏನಾದರೂ ಬೇಕು ಅಂದಕೂಡಲೇ ಇಲ್ಲ ಎಂದು ಹೇಳದೇ ಕೊಟ್ಟುಬಿಡುತ್ತಿದ್ದನು. ಇದರಿಂದ ಒಲವಯ್ಯನ ಮನೆಯ ಸಾಮಾನುಗಳೆಲ್ಲ ಬೇಗ ಸವೆದು ಹೋಗುತ್ತಿದ್ದವು ಇಲ್ಲವಾದರೆ ಹಾಳಾಗಿಬಿಡುತ್ತಿದ್ದವು. ನಂತರ ಪೇಟೆಗೆ ಹೋಗಿ ಅವುಗಳನ್ನೆಲ್ಲ ರಿಪೇರಿ ಮಾಡಿಸುತ್ತಿದ್ದನು ಅಥವಾ ಒಮ್ಮೊಮ್ಮೆ ಹೊಸತನ್ನೇ ತರುತ್ತಿದ್ದನು. ಇದರಿಂದ ಅವನಿಗೆ ಜಾಸ್ತಿ ಹಣವೂ ಖರ್ಚಾಗುತ್ತಿತ್ತು. ಆಗ ಚೆಲುವಯ್ಯ ಮನೆಗೆ ಬರುವ ಕೆಲಸದವರ ಬಳಿ ಊರಿನವರ ಹತ್ತಿರ 'ನನ್ನ ಮನೆಯ ವಸ್ತುಗಳನ್ನು ನೋಡಿ ಹೇಗೆ ಲಕಲಕ ಹೊಳೆಯುವಂತೆ ಇಟ್ಟುಕೊಂಡಿದ್ದೇನೆ. ಒಮ್ಮೆಯೂ ಯಾವುದನ್ನೂ ರಿಪೇರಿಗೆಂದು ಪೇಟೆಗೆ ಒಯ್ದಿಲ್ಲ. ಒಲವಯ್ಯನಿಗೆ ಅವನ್ನೆಲ್ಲ ಬಳಸುವ ರೀತಿಯೇ ಗೊತ್ತಿಲ್ಲ ಅದಕ್ಕೇ ಅವನ ಮನೆಯ ವಸ್ತುಗಳೆಲ್ಲ ಬೇಗ ಹಾಳಾಗುತ್ತವೆ' ಎಂದು ಜಂಭದಿಂದ ಹೇಳಿಕೊಳ್ಳುತ್ತಿದ್ದನು. ಒಮ್ಮೆ ಏನಾಯ್ತು ಅಂದ್ರೆ ತೋಟದಲ್ಲಿ ಅಗೆಯುತ್ತಿದ್ದಾಗ ಒಲವಯ್ಯನ ಮನೆಯ ಪಿಕಾಸಿ ಮುರಿದು ಹೋಯಿತು. ಪೇಟೆಗೆ ಹೋಗಿ ರಿಪೇರಿ ಮಾಡಿಸಿಕೊಂಡು ಬರುವುದಕ್ಕೆ ಜಾಸ್ತಿ ವೇಳೆ ಬೇಕಾಗುತ್ತದೆ. ಅಲ್ಲದೇ ಅಷ್ಟು ವೇಳೆಗೆ ಮಾಡುತ್ತಿದ್ದ ಕೆಲಸ ನಿಂತು ಹೋಗುತ್ತದೆ. ಆಗ ಅವನಿಗೆ ಚೆಲುವಯ್ಯನ ನೆನಪಾಯ್ತು. ನಾನು ಅವನಿಗೆ ಎಷ್ಟೊಂದು ಬಾರಿ ಸಹಾಯ ಮಾಡಿದ್ದೇನಲ್ಲ ಇವತ್ತು 'ಒಂದು ಬಾರಿ ನಿಮ್ಮ ಮನೆಯ ಪಿಕಾಸಿ ಕೊಡು ಎಂದರೆ ಕೊಡದೇ ಇರಲಾರ' ಎನಿಸಿತು. ಒಲವಯ್ಯ ಚೆಲುವಯ್ಯನ ಮನೆಗೆ ಹೋಗಿ ತನ್ನ ಮನೆಯ ಪಿಕಾಸಿಯನ್ನು ರಿಪೇರಿ ಮಾಡಿಸಿಕೊಂಡು ಬರುವತನಕ ಅವನ ಮನೆಯ ಪಿಕಾಸಿಯನ್ನು ಕೊಡುವುದಕ್ಕೆ ಕೇಳಿಕೊಂಡನು.

ಆದರೆ ಲೆಕ್ಕಾಚಾರದ ಚೆಲುವಯ್ಯನು ತನ್ನ ಮನೆಯಲ್ಲಿದ್ದ ಪಿಕಾಸಿಯನ್ನು ಅಡಗಿಸಿಟ್ಟುಕೊಂಡು 'ಅಯ್ಯೋ ಒಲವಯ್ಯ ನನ್ನ ಬಳಿ ಇದ್ದ ಪಿಕಾಸಿಯನ್ನು ನಿನಗೆ ಕೊಡುತ್ತಿದ್ದೆ ಆದರೆ ಇವತ್ತೇ ಯಾರೋ ತೆಗೆದುಕೊಂಡು ಹೋಗಿದ್ದಾರೆ' ಎಂದು ಸುಳ್ಳು ಹೇಳಿದನು. ಪಾಪ ಒಲವಯ್ಯ ಇದನ್ನು ನಂಬಿದನು. ಆದರೆ ಸ್ವಲ್ಪ ಸಮಯದ ನಂತರ ಅವನ ಮನೆಯ ಕೆಲಸದವನೊಬ್ಬನು ಅಂಗಳದಲ್ಲಿ ಅದೇ ಪಿಕಾಸಿಯಿಂದ ಅಗೆಯುತ್ತಿದ್ದಿದ್ದನ್ನು ನೋಡಿದನು. ಒಲವಯ್ಯನಿಗೆ ಚೆಲುವಯ್ಯ ಸುಳ್ಳು ಹೇಳಿದನೆಂಬುದು ಗಮನಕ್ಕೆ ಬಂತು. ಹೀಗೇ ತುಂಬಾ ಸಲ ಒಲವಯ್ಯನಿಗೆ ಇದೇ ಅನುಭವವಾಯಿತು. ಆದರೆ ಅವನು ಚೆಲುವಯ್ಯನ ಬಳಿ ಏನನ್ನೂ ಹೇಳುವುದಕ್ಕೆ ಹೋಗಲಿಲ್ಲ. ಸಮಯ ಬಂದಾಗ ನೋಡಿಕೊಂಡರಾಯಿತೆಂದು ಸುಮ್ಮನಾದನು. ಒಂದು ದಿನ ಚೆಲುವಯ್ಯನಿಗೆ ಕೆಲಸ ಮಾಡುತ್ತಿದ್ದಾಗ ಕುಡಗೋಲು ಮುರಿದು ಹೋಯಿತು. ಆತ ಕೆಲಸ ನಿಂತು ಹೋಗುತ್ತದೆಯೆಂದು ಒಲವಯ್ಯನ ಮನೆಗೆ ಬಂದು ಕುಡಗೋಲು ಕೇಳಿದನು. ಒಲವಯ್ಯ ಹಿಂದಿನ ದಿನವಷ್ಟೇ ಹೊಸ ಕುಡಗೋಲುಗಳನ್ನು ತಂದಿದ್ದನು. ಆದರೂ ಬೇಕೆಂತಲೇ ' ಅಯ್ಯೋ ಚೆಲುವಯ್ಯ ನನ್ನ ಬಳಿ ಕುಡಗೋಲುಗಳು ಇದ್ದಿದ್ದೇನೋ ನಿಜ ಆದರೆ ಈಗತಾನೇ ರಿಪೇರಿಗೆ ಕೊಟ್ಟು ಬಂದೆ' ಎಂದನು.

ಚೆಲುವಯ್ಯ ಮನೆಗೆ ಬಂದವನೇ ಕೆಲಸದವರ ಬಳಿ 'ಒಲವಯ್ಯ ನಿನ್ನೆಯಷ್ಟೇ ಹೊಸ ಕುಡಗೋಲು ತಂದಿದ್ದನ್ನು ನಾನೇ ನೋಡಿದ್ದೇನೆ ಆದರೂ ನನ್ನ ಬಳಿ ಸುಳ್ಳು ಹೇಳಿದ' ಎಂದನು. ಆಗ ಕೆಲಸದವರು 'ದಣಿಗಳೇ ತಪ್ಪು ತಿಳಿಯಬೇಡಿ ನೀವೂ ಎಷ್ಟೋ ಸಲ ಕೆಲವು ವಸ್ತುಗಳು ನಿಮ್ಮ ಮನೆಯಲ್ಲಿ ಇದ್ದರೂ ಅವರು ಕೇಳಿದಾಗ ಇಲ್ಲ ಎಂದು ಸುಳ್ಳು ಹೇಳಿದ್ದೀರಲ್ಲವೇ? ಅದಕ್ಕೇ ಅವರೂ ಹಾಗೇ ಮಾಡಿದ್ದಾರೆ. ನೀವು ಅವರಿಗೆ ಸಹಾಯ ಮಾಡಿದ್ದರೆ ಅವರೂ ಮಾಡುತ್ತಿದ್ದರು. ಹೇಗೂ ಅಕ್ಕಪಕ್ಕದ ಮನೆಯವರು ಒಂದಲ್ಲಾ ಒಂದು ಕೆಲಸಕ್ಕೆ ಪರಸ್ಪರ ಸಹಾಯ ಸಹಕಾರ ಬೇಕಾಗುತ್ತಲೇ ಇರುತ್ತದೆ' ಎಂದರು. ಆಗ ಚೆಲುವಯ್ಯನಿಗೆ ತನ್ನ ತಪ್ಪಿನ ಅರಿವಾಗಿ ಮುಜುಗರವಾಯಿತು.

■ **ಕಲ್ಪನಾ ಹೆಗಡೆ ಸೋಮನಳ್ಳಿ**